124
153ನೇ ೮

**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀಮತಿ ಬಲ್ಕೀಸ್ ಬಾನು ರವರ**
**ನಿಯಮ 72ರ ಗಮನ ಸೆಳೆಯುವ ಸೂಚನೆಗೆ ಉತ್ತರ.**

---

**ವಿಷಯ:** **ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಹೆಚ್.ಬಿ.ಆರ್ ಬಡಾವಣೆ 2ನೇ ಬ್ಲಾಕ್, 1ನೇ ಹಂತದ 8ನೇ ಅಡ್ಡ ರಸ್ತೆಯಲ್ಲಿ (ಮಸ್ಜಿದ್ ಎ ಬಿಲಾಲ್ ರಸ್ತೆಯಲ್ಲಿ) ಕೆಲವು ವಾಣಿಜ್ಯ ವಾಹನಗಳು ಸೇರಿದಂತೆ ಇತರ ವಾಹನಗಳನ್ನು ಖಾಯಂ ಆಗಿ ನಿಲ್ಲಿಸುತ್ತಿರುವುದರಿಂದ ಬಡಾವಣೆಯ ತಿರುವು ರಸ್ತೆಗಳಾದ Infant Jesus School ರಸ್ತೆಯಲ್ಲಿನ ತಿರುವಿನಲ್ಲಿ ಅಪಘಾತಗಳು ಆಗುತ್ತಿರುವುದಲ್ಲದೆ ಮಸೀದಿಗೆ ಬರುವವರ ವಾಹನಗಳ ನಿಲುಗಡೆಗೂ ಸಮಸ್ಯೆಯಾಗುತ್ತಿದೆ. ಆದ ಕಾರಣ ಸದರಿ 8ನೇ ಅಡ್ಡ ರಸ್ತೆಯಲ್ಲಿ (ಮಸ್ಜಿದ್ ಎ ಬಿಲಾಲ್ ರಸ್ತೆಯಲ್ಲಿ) Infant Jesus School ರಸ್ತೆಯಲ್ಲಿನ ತಿರುವಿನಲ್ಲಿ ಅನಧಿಕೃತವಾಗಿ ನಿಲ್ಲಿಸಿರುವ ವಾಹನಗಳನ್ನು ತೆರವುಗೊಳಿಸುವ ಹಾಗೂ ಮುಂದಿನ ದಿನಗಳಲ್ಲಿ ಸದರಿ ರಸ್ತೆಯಲ್ಲಿ ಅನಧಿಕೃತವಾಗಿ ವಾಹನಗಳನ್ನು ನಿಲ್ಲಿಸದಂತೆ ಕ್ರಮ ಕೈಗೊಳ್ಳುವ ಕುರಿತು.**

**ಉತ್ತರ:**

- ಹೆಚ್.ಬಿ.ಆರ್. ಬಡಾವಣೆ 2ನೇ ಬ್ಲಾಕ್, 1ನೇ ಹಂತದ 8ನೇ ಅಡ್ಡರಸ್ತೆಯು (ಮಸ್ಜಿದ್ ಎ ಬಿಲಾಲ್ ರಸ್ತೆಯಲ್ಲಿ) ಜನವಸತಿ ಪ್ರದೇಶದಿಂದ ಕೂಡಿರುವ ರಸ್ತೆಯಾಗಿರುತ್ತದೆ.

- ಹೆಚ್.ಬಿ.ಆರ್ ಬಡಾವಣೆಯ 2ನೇ ಬ್ಲಾಕ್ ನ 80 ಅಡಿ ರಸ್ತೆಯಲ್ಲಿ ಬೆಂಗಳೂರು ನಗರ ಜಲಮಂಡಳಿ ವತಿಯಿಂದ ಕಾಮಗಾರಿ ನಡೆಯುತ್ತಿದ್ದು, ಈ ಸಂಬಂಧ ಲಿಂಗರಾಜಪುರಂ ನಿಂದ ಹೆಣ್ಣೂರು ಮುಖ್ಯ ರಸ್ತೆ ಕಡೆಗೆ ಹೋಗುವ ವಾಹನಗಳಿಗೆ ಅಯೋಧ್ಯ ಜಂಕ್ಷನ್ ಬಳಿ ಎಡತಿರುವು ಪಡೆದುಕೊಂಡ ನಂತರ ಇಂದಿರಾ ಕ್ಯಾಂಟೀನ್ ಬಳಿ ಬಲತಿರುವು ಪಡೆದುಕೊಂಡು ಹೆಚ್.ಬಿ.ಆರ್ ಬಿಡಿಎ ಕಾಂಪ್ಲೆಕ್ಸ್ ಕಡೆಗೆ ಬಂದು ಹೆಣ್ಣೂರು ಕಡೆಗೆ ಹೋಗಲು ವಾಹನಗಳಿಗೆ ಪರ್ಯಾಯ ಮಾರ್ಗ ವ್ಯವಸ್ಥೆಯನ್ನು ಮಾಡಿದ್ದು, ಮುಖ್ಯ ರಸ್ತೆಯಲ್ಲಿ ಹೋಗುತ್ತಿದ್ದ ಎಲ್ಲಾ ವಾಹನಗಳು ವಸತಿ ಪ್ರದೇಶದ ರಸ್ತೆಗಳಲ್ಲಿ ಹೋಗುತ್ತಿರುವುದರಿಂದ ಪೀಕ್ ಅವರ್ ಸಮಯದಲ್ಲಿ ಸ್ವಲ್ಪ ಮಟ್ಟಿನ ಸಂಚಾರ ದಟ್ಟಣೆ ಇದ್ದು, ಸದರಿ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ಸಿಬ್ಬಂದಿಗಳನ್ನು ನೇಮಕ ಮಾಡಿ ಸುಗಮ ಸಂಚಾರಕ್ಕೆ ಆಧ್ಯತೆ ನೀಡಲಾಗುತ್ತಿದೆ.

- ಈ ರಸ್ತೆಯಲ್ಲಿ ವಾಣಿಜ್ಯ ವಾಹನಗಳು ಸೇರಿದಂತೆ ಇತರೆ ವಾಹನಗಳನ್ನು ನಿಲ್ಲಿಸದಂತೆ ನಿಗಾವಹಿಸಲು ಕೋಬ್ರಾ ಸಿಬ್ಬಂದಿಯನ್ನು ಪೆಟ್ರೋಲಿಂಗ್ ಕರ್ತವ್ಯಕ್ಕೆ ನೇಮಕ ಮಾಡಲಾಗಿರುತ್ತದೆ.

- ಈ ರಸ್ತೆಯಲ್ಲಿ ಸಾರ್ವಜನಿಕರ ಸುಗಮ ಸಂಚಾರದ ನಿರ್ವಹಣೆಗಾಗಿ ಎರಡೂ ಪಾಳಿಗಳಲ್ಲಿ ಅಧಿಕಾರಿ/ಸಿಬ್ಬಂದಿಗಳನ್ನು ನೇಮಕ ಮಾಡಿ ಸುಗಮ ಸಂಚಾರದ ನಿರ್ವಹಣೆಯನ್ನು ಕೈಗೊಳ್ಳಲಾಗುತ್ತಿದ್ದು, ಮುಂದಿನ ದಿನಗಳಲ್ಲಿಯೂ ಸಹ ಯಾವುದೇ ರೀತಿಯ ವಾಣಿಜ್ಯ ಹಾಗೂ ಇತರೆ ವಾಹನಗಳ ಅನಧಿಕೃತ ನಿಲುಗಡೆಯಾಗದಂತೆ ನಿರಂತರವಾಗಿ ಕ್ರಮ ಕೈಗೊಳ್ಳಲಾಗುವುದು.

---

ಹೆಚ್‌ಡಿ 372 ಎಸ್‌ಎಸ್‌ಟಿ 2024

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು